# ಅಧ್ಯಾಯ – 1 ಭಾರತದಲ್ಲಿ ವ್ಯವಸಾಯಾಭಿವೃದ್ಧಿ

## 1] ವ್ಯವಸಾಯದ ಪ್ರಾಮುಖ್ಯತೆ :–

1. ಸುಮಾರು ಶೇ 58 ರಷ್ಟು ಜನರಿಗೆ ವ್ಯವಸಾಯವನ್ನು ಮುಖ್ಯ ಕಸುಬನ್ನಾಗಿ ಅವಲಂಬಿಸಿದ್ದಾರೆ.
2. ವ್ಯವಸಾಯವು ಶೇ. 35 ರಷ್ಟು ರಾಷ್ಟ್ರೀಯ ವರಮಾನವನ್ನು ಒದಗಿಸಿಕೊಡುತ್ತದೆ.
3. ಜನರ ಮತ್ತು ಪ್ರಾಣಿಗಳ ಆಹಾರ ಮತ್ತು ಮೇವಿಗೆ ಮುಖ್ಯ ಆಧಾರವಾಗಿದೆ.
4. ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ. ಉದಾ : ಸಕ್ಕರೆ ಕೈಗಾರಿಕೆಗೆ ಕಬ್ಬು.
5. ದೇಶದ ಆಂತರಿಕ ವ್ಯಾಪಾರಕ್ಕೆ ಸಹಾಯಕವಾಗಿದೆ.
6. ವ್ಯವಸಾಯ ಉತ್ಪನ್ನಗಳ ರಫ್ತಿನಿಂದಾಗಿ ವಿದೇಶಿ ವಿನಿಮಯ ಗಳಿಸಿಕೊಡುತ್ತದೆ.
7. ಬಂಡವಾಳದ ಕೊರತೆ ನಿವಾರಿಸುತ್ತದೆ.
8. ತೃತೀಯ ರಂಗದ ಬೆಳವಣಿಗೆಗೆ ಪೂರಕವಾಗಿದೆ. ಉದಾ : ಸಾರಿಗೆ, ಸಂಪರ್ಕ, ಬ್ಯಾಂಕುಗಳು.

## 2] ಭಾರತದ ಕೃಷಿ ಹಿಂದುಳಿಯಲು ಕಾರಣಗಳು.

1. ಮನ್ಸೂನ್ ಮಳೆಯು ಅಕಾಲಿಕ ಅನಿಶ್ಚಿತ ಹಾಗೂ ದೇಶದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿ ಬೀಳುವದಿಲ್ಲ.
2. ಭೂ ಹಿಡುವಳಿಗಳ ವಿಭಜನೆ & ಛಿದ್ರೀಕರಣದಿಂದಾಗಿ ವೈಜ್ಞಾನಿಕ ಕೃಷಿ ಮಾಡಲು ಸಾಧ್ಯವಿಲ್ಲ.
3. ಭೂ ಸವೆತದ ಪರಿಣಾಮ ಭೂಮಿಯ ಫಲವತ್ತತೆ ಕಡಿಮೆಯಾಗಿ ಇಳುವರಿ ಕಡಿಮೆಯಾಗುತ್ತದೆ.
4. ಹಳೇ ಕಾಲದ & ಪ್ರಾಚೀನ ಬೇಸಾಯದ ಪದ್ಧತಿ ಅನುಸರಿಸುವದರಿಂದ ಕೃಷಿ ಉತ್ಪಾದನೆ ಕಡಿಮೆ.
5. ಭೂ ಒಡೆತನದ ಸಮಸ್ಯೆಗಳಿಂದಾಗಿ ಜಮೀನಿನ ಅಭಿವೃದ್ಧಿಗೆ ಯಾವುದೇ ಕಾಳಜಿ ವಹಿಸುವದಿಲ್ಲ.
6. ದೋಷಯುಕ್ತ ಮಾರುಕಟ್ಟೆಯಿಂದಾಗಿ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ.

## 3] ಭಾರತದಲ್ಲಿ ವ್ಯವಸಾಯಾಭಿವೃದ್ಧಿಗೆ ಅಥವಾ ಬೇಸಾಯದ ಆಧುನೀಕರಣಕ್ಕೆ ಕೈಗೊಂಡ ಕ್ರಮಗಳು.

1. ವಿವಿಧ ರೀತಿಯ ನೀರಾವರಿ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉದಾ : ಕೆರೆ, ಕಾಲುವೆ, ಭಾವಿ.
2. ಭೂ ಹಿಡುವಳಿಗಳ ಕ್ರೋಢಿಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ.
3. ಮಣ್ಣಿನ ಸಂರಕ್ಷಣೆ ಕ್ರಮಗಳನ್ನು ಕೈಗೋಳ್ಳುವದು.
4. ಇಳಿಜಾರಿನ ಪ್ರದೇಶಗಳಲ್ಲಿ ಕಾಂಟೂರು ಮಾದರಿಯ ಬೇಸಾಯ ಕೈಗೊಳ್ಳುವದು.
5. ವ್ಯವಸಾಯದಲ್ಲಿ ವಿಜ್ಞಾನ & ತಂತ್ರಜ್ಞಾನ ಅಳವಡಿಸುವದು.
6. ಗೇಣಿದಾರರಿಗೆ ಭೂಮಿಯ ಒಡೆತನ ಕೊಡಲು 'ಉಳುವವನಿಗೆ ಭೂಮಿ' ಶಾಸನ ಜಾರಿಗೊಳಿಸಲಾಗಿದೆ.

7. ಜೀತ ಪದ್ದತಿಯನ್ನು ರದ್ದುಗೊಳಿಸಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಕಾಯ್ದೆ ಜಾರಿಗೆ ತರಲಾಗಿದೆ.

8. ಕೃಷಿ ಮಾರುಕಟ್ಟೆಯನ್ನು ಸುಧಾರಿಸುವದು.

4] ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು

1. ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವದು. 2. ಕಾಡುಗಳನ್ನು ಬೆಳೆಸುವದು.

3. ಹೊಲದ ಸುತ್ತ ಒಡ್ಡುಗಳನ್ನು ನಿರ್ಮಿಸುವದು. 4. ಬೆಳೆಗಳನ್ನು ಪರ್ಯಾಯ ರೀತಿಯಲ್ಲಿ ಬೆಳೆಗಳನ್ನು ಬೆಳೆಯುವದು.

5. ಮಣ್ಣಿನ ಗುಣಕ್ಕೆ ಅನುಗುಣವಾಗಿ ಗೊಬ್ಬರಗಳನ್ನು ಉಪಯೋಗಿಸುವದು.

5] ರಾಜಸ್ಥಾನದ ಸೂರತ್‌ಗರ್ ಯಾಂತ್ರಿಕೃತ ಕೃಷಿ ಕೇಂದ್ರಕ್ಕೆ ಉದಾಹರಣೆಯಾಗಿದೆ.

6] ರೈತರಿಗೆ ಗರಿಷ್ಟ ಸೌಲಭ್ಯ ದೊರೆಯುವಂತೆ ಮಾಡಿ ಕೆಲವು ಸ್ಥಳಗಳಲ್ಲಿ ತೀವ್ರ ಬೇಸಾಯ ಕ್ರಮಗಳನ್ನು ಆರಂಭಿಸಲಾಗಿದೆ. ಇದನ್ನು ಪ್ಯಾಕೇಜ ಕಾರ್ಯಕ್ರಮ ಎನ್ನತ್ತೇವೆ.

7] ವೈಜ್ಞಾನಿಕ ಬೇಸಾಯ : ಕೃಷಿಯಲ್ಲಿ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಅನುಸರಿಸುವದನ್ನು ವೈಜ್ಞಾನಿಕ ಬೇಸಾಯ ಎನ್ನುವರು. ವೈಜ್ಞಾನಿಕ ಬೇಸಾಯದಲ್ಲಿ ಈ ಕೆಳಗಿನ ಅಂಶಗಳು ಬರುತ್ತವೆ.

1. ಮಣ್ಣಿನ ಸಂರಕ್ಷಣೆ 2. ನೀರಾವರಿ ಸೌಲಭ್ಯ 3. ರಸಗೊಬ್ಬರಗಳ ಬಳಕೆ

4. ಕ್ರಮಿನಾಶಕಗಳ ಬಳಕೆ 5. ಯಾಂತ್ರಿಕೃತ ಬೇಸಾಯ

6. ಹನಿ ನೀರಾವರಿ ಮತ್ತು ತುಂತುರು ನೀರಾವರಿ 7. ಹೆಚ್ಚು ಇಳುವರಿ ಕೊಡುವ ಬಿತ್ತನೆ ಬೀಜಗಳ ಬಳಕೆ.

8] ಹಸಿರು ಕ್ರಾಂತಿ ಎಂದರೆ ಬೇಸಾಯದಲ್ಲಿ ತ್ವರಿತವಾಗಿ ಉತ್ಪನ್ನದಲ್ಲಿ ಹೆಚ್ಚಳ ಕಾಣುವದೇ ಆಗಿದೆ.

9] ಕ್ರಿ. ಶ. 1976 ರಲ್ಲಿ ಜೀತ ಪದ್ದತಿಯನ್ನು ರದ್ದುಪಡಿಸಲಾಯಿತು.

10] ಇಪ್ಪತ್ತು ಅಂಶಗಳ ಕಾರ್ಯಕ್ರಮಗಳು

ಕ್ರಿ.ಶ. 1975 ರಲ್ಲಿ ಭಾರತ ಸರಕಾರ ಗ್ರಾಮಾಂತರ ಪ್ರದೇಶಗಳ ಜನರ ಜೀವನ ಅಭಿವೃದ್ಧಿಗಾಗಿ ಇಪ್ಪತ್ತು ಅಂಶಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. 1982 ರಲ್ಲಿ ಪರಿಷ್ಕರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬರುವ ಯೋಜನೆಗಳೆಂದರೆ –

1 ಸಮಾಜದ ಭೂರಹಿತ ಮತ್ತು ಬಡ ಕೃಷಿ ಕಾರ್ಮಿಕರಿಗೆ ಉಚಿತವಾಗಿ ಮನೆ ನಿವೇಶನಗಳನ್ನು ಹಂಚುವದು.

2. ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚುವದು.

3. ಭೂರಹಿತ ಕಾರ್ಮಿಕರ ಸಾಲಗಳ ಮರುಪಾವತಿಯನ್ನು ರದ್ದಗೊಳಿಸುವದು.

4. ರಾಷ್ಟ್ರೀಕೃತ ಬ್ಯಾಂಕುಗಳಿಂದ ಪರ್ಯಾಯ ಉದ್ಯೋಗಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವದು.

5. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವದು.

6. ರೈತರ ಬಿಡುವಿನ ತಿಂಗಳುಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವದು.

11] ಭಾರತೀಯ ಕೃಷಿ ಮಾರುಕಟ್ಟೆಯನ್ನು ಸುಧಾರಿಸಲು ಕೈಗೊಂಡ ಕ್ರಮಗಳು

1. ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆ.
2. ಸಹಕಾರಿ ಮಾರುಕಟ್ಟೆಗಳ ನಿರ್ಮಾಣ.
3. ಪ್ರಮಾಣೀಕೃತ ಮತ್ತು ಗುಣಮಟ್ಟ ವರ್ಗೀಕರಣ
4. ಉಗ್ರಾಣ ಸೌಲಭ್ಯ ವಿಸ್ತರಣೆ
5. ಶೈತ್ಯಾಗಾರದ ಸೌಲಭ್ಯಗಳ ಬಳಕೆ.

12] ನಿಯಂತ್ರಿತ ಮಾರುಕಟ್ಟೆಗಳ ಕಾರ್ಯಗಳು

1. ಸರಿಯಾದ ತೂಕ ಮತ್ತು ಅಳತೆಗಳನ್ನು ನೋಡಿಕೊಳ್ಳುವದು.
2. ಮಾರುಕಟ್ಟೆಯ ಬೆಲೆ ಮತ್ತು ಶುಲ್ಕ ನಿಗದಿಗೊಳಿಸುವದು.
3. ನಿಯಂತ್ರಿತ ಮಾರುಕಟ್ಟೆಯ ವ್ಯಾಪಾರಿಗಳಿಗೆ ಪರವಾನಗಿ ( ಲೈಸೆನ್ಸ ) ನೀಡುವದು.
4. ರೈತರ ಉತ್ಪನ್ನಗಳಿಗೆ ಉಗ್ರಾಣ ವ್ಯವಸ್ಥೆಯನ್ನು ಒದಗಿಸುವದು.
5. ನಿಯಂತ್ರಿತ ಮಾರುಕಟ್ಟೆಗಳ ಬೆಲೆಗಳ ವಿವರಗಳನ್ನು ದಿನವಹಿ ಒದಗಿಸುವದು.
6. ಮಾರುಕಟ್ಟೆಗೆ ಬರುವ ವಸ್ತುಗಳನ್ನು ಹರಾಜಿನ ಮೂಲಕ ಮಾರಾಟ ಮಾಡುವದು.
7. ವ್ಯಾಪಾರದಲ್ಲಿ ಮೋಸ ಮಾಡಿದಲ್ಲಿ ಅಂತಹ ವರ್ತಕರ ಪರವಾನಿಗೆಯನ್ನು ರದ್ದುಗೊಳಿಸುವದು.

13] ಸಹಕಾರಿ ಮಾರಾಟ ಸಂಘಗಳಿಂದಾಗುವ ಅನುಕೂಲಗಳು.

1 ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಸಹಕಾರಿ ಸಂಘಗಳಿಗೆ ಮಾರಾಟ ಮಾಡುವದರಿಂದ ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ.
2. ಸಹಕಾರಿ ಸಂಘಗಳಲ್ಲಿ ಉಗ್ರಾಣ, ಶೈತ್ಯಾಗಾರ ಮತ್ತು ಸಂಗ್ರಹಾಲಯಗಳ ವ್ಯವಸ್ಥೆ ಇರುತ್ತದೆ.
3. ವಸ್ತುಗಳ ಗುಣಮಟ್ಟವನ್ನು ಈ ಸಹಕಾರಿ ಸಂಘಗಳು ಮಾಡುತ್ತವೆ.
4. ರೈತರಿಗೆ ಬೇಕಾದ ಬೀಜಗಳು, ರಸಗೊಬ್ಬರ, ಕ್ರಿಮಿನಾಶಕಗಳು ಮತ್ತು ಕೃಷಿ ಉಪಕರಣಗಳನ್ನು ರಿಯಾಯತಿ ಬೆಲೆಗೆ ಮಾರಾಟ ಮಾಡುತ್ತವೆ.

14] ಬೆಳೆ ವಿಮೆ :- ಭಾರತದಲ್ಲಿ ವ್ಯವಸಾಯವು ಮನ್ಸೂನ್ ಮಳೆಯೊಡನೆ ಆಡುವ ಜೂಜಾಟವಾಗಿದೆ. ಅತೀವೃಷ್ಟಿ ಮತ್ತು ಅನಾವೃಷ್ಟಿ ಎರಡೂ ಸಂದರ್ಭಗಳಲ್ಲಿ ಬಳೆಯು ನಾಶವಾಗುತ್ತದೆ. ಕೀಟಗಳು ಬೆಳೆಯನ್ನು ನಾಶ ಮಾಡುತ್ತವೆ. ಈ ಕಾರಣಗಳಿಂದಾಗಿ ರೈತರು ನಷ್ಟಕ್ಕೆ ಗುರಿಯಾಗುತ್ತಾರೆ. ಈ ಸಮಸ್ಯೆಯಿಂದ ರೈತರನ್ನು ಪಾರುಮಾಡಲು ಅವರಿಗೆ ಬೆಳೆವಿಮೆ ಬೇಕು.

15] ಕ್ರಿ ಶ 1965 ರಲ್ಲಿ ರೈತರು ಬೆಳೆದ ಆಹಾರ ಉತ್ಪನ್ನಗಳ ಸಂಗ್ರಹಣೆಗಾಗಿ ಭಾರತದ ಆಹಾರ ನಿಗಮ ಸ್ಥಾಪಿಸಲ್ಪಟ್ಟಿತು.

16] ಭಾರತದ ಆಹಾರ ನಿಗಮದ ಕಾರ್ಯಗಳು

1. ರೈತರ ಕೃಷಿ ಉತ್ಪನ್ನಗಳನ್ನು ಸರಿಯಾದ ಬೆಲೆಗೆ ಕೊಳ್ಳುವದು.
2. ಕೊಂಡುಕೊಂಡ ಉತ್ಪನ್ನಗಳನ್ನು ಉಗ್ರಾಣ ಅಥವಾ ಗೋದಾಮುಗಳಿಗೆ ಸಾಗಿಸುವದು.
3. ಉಗ್ರಾಣಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಉತ್ಪನ್ನಗಳನ್ನು ಸಂಗ್ರಹಿಸುವದು.
4. ಯೋಗ್ಯ ಬೆಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಜನರಿಗೆ ಮಾರಾಟ ಮಾಡುವದು.

17] ಉತ್ತರಪ್ರದೇಶದ ಹಾಪುರ ಎಂಬಲ್ಲಿ ಭಾರತೀಯ ಧಾನ್ಯ ಸಂಗ್ರಹಣಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

18] ವೈಜ್ಞಾನಿಕ ಸಂಗ್ರಹಣಾ ಸೌಲಭ್ಯವನ್ನು ವೃದ್ಧಿಪಡಿಸಲು ಸಂಶೋಧನೆ ಮತ್ತು ತರಬೇತಿ ನೀಡಲು ಮೈಸೂರಿನಲ್ಲಿ ಕೇಂದ್ರೀಯ ಆಹಾರ ಮತ್ತು ತಾಂತ್ರಿಕ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಶ್ರೀ ಶರಣಬಸಪ್ಪ ಎಲ್ ಗೂಡುರು ಸರಕಾರಿ ಪ್ರೌಢ ಶಾಲೆ ಗುಂಡ ತಾ : ಸಿಂಧನೂರು ಜಿ : ರಾಯಚೂರು

## ಅಧ್ಯಾಯ – 2 ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು

1] ಗೃಹ ಕೈಗಾರಿಕೆಗಳನ್ನು ಗುಡಿ ಕೈಗಾರಿಕೆಗಳೆಂದೂ ಕರೆಯುತ್ತಾರೆ.

2] ಗೃಹ & ಸಣ್ಣ ಪ್ರಮಾಣದ ಕೈಗಾರಿಕೆಗಳಿಗಿರುವ ವ್ಯತ್ಯಾಸ

ಗೃಹ ಕೈಗಾರಿಕೆಗಳನ್ನು ಸಮಾನ್ಯವಾಗಿ ಕುಶಲಕರ್ಮಿಗಳು ತಮ್ಮ ಮನೆಗಳಲ್ಲಿ ನಡೆಸುತ್ತಾರೆ. ಇವರಿಗೆ ಅವರ ಕುಟುಂಬದ ಸದಸ್ಯರು ಮತ್ತು ಕೆಲಸ ಕಲಿಯುವವರು ಸಹಾಯ ಮಾಡುತ್ತಾರೆ. ಇವು ಪ್ರಧಾನವಾಗಿ ಹಳ್ಳಿಗಳಲ್ಲಿ ಕೇಂದ್ರಿಕೃತವಾಗಿರುತ್ತವೆ.

ಆದರೆ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುತ್ತಾರೆ. ಕೂಲಿ ಕಾರ್ಮಿಕರನ್ನು ನೇಮಿಸಿ ಕೊಳ್ಳುತ್ತಾರೆ. ಇವು ಒಂದು ನಿರ್ಧಿಷ್ಟ ಕಟ್ಟಡದಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ.

3] ಗೃಹ ಕೈಗಾರಿಕೆಗಳು : – ಕೆತ್ತನೆ ಕೆಲಸ, ಬುಟ್ಟಿ ಹೆಣೆಯುವದು, ಬೊಂಬೆ ತಯಾರಿಕೆ, ಕೈಮಗ್ಗದಲ್ಲಿ ಬಟ್ಟೆ ಹಾಗೂ ಕಂಬಳಿ ನೇಯುವದು, ಚಾಪೆ ತಯಾರಿಕೆ, ಬಡಗಿತನ, ಕಮ್ಮಾರಿಕೆ,

4] ಸಣ್ಣ ಪ್ರಮಾಣದ ಕೈಗಾರಿಕೆಗಳು :– ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಸೈಕಲ್ಲುಗಳು, ರೇಡಿಯೋ, ವಿದ್ಯುತ್ ಪಂಕ, ಹೊಲಿಗೆ ಯಂತ್ರಗಳು ಸಿದ್ದಪಡಿಸಿದ ಉಡುಪುಗಳು ಇತ್ಯಾದಿ.

5] ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಪಾತ್ರ

1. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೊಗಲಾಡಿಸುತ್ತದೆ.
2. ಗ್ರಾಮಾಂತರ ಪ್ರದೇಶಗಳಲ್ಲಿ ಪರ್ಯಾಯ ಉದ್ಯೋಗಗಳನ್ನು ಒದಗಿಸಿ ಕೃಷಿ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ.
3. ಇವುಗಳ ಸ್ಥಾಪನೆಗೆ ಹೆಚ್ಚು ಬಂಡವಾಳದ ಅವಶ್ಯಕತೆ ಇಲ್ಲ.
4. ಗ್ರಾಮಾಂತರ ಪ್ರದೇಶದ ಜನರಲ್ಲಿ ಅಡಗಿರುವ ಸೂಪ್ತ ಕೌಶಲ್ಯಗಳನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ.
5. ಇವುಗಳಲ್ಲಿ ಮುಷ್ಕರ, ಬೀಗಮುದ್ರೆ ಮುಂತಾದ ಸಮಸ್ಯೆಗಳು ಇರುವದಿಲ್ಲ.
6. ಈ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿಯ ಅವಶ್ಯಕತೆ ಇಲ್ಲ.
7. ಅನೇಕ ಜನರಿಗೆ ಸ್ವಯಂ ಉದ್ಯೋಗಕ್ಕೆ ಅವಕಾಶ ಕಲ್ಪಿಸುತ್ತವೆ.

6] ಗೃಹ & ಸಣ್ಣ ಪ್ರಮಾಣದ ಕೈಗಾರಿಕೆಗಳ ಸಮಸ್ಯೆಗಳು

1. ಕಚ್ಚಾ ಪದಾರ್ಥಗಳ ಅಸಮರ್ಪಕ ಪುರೈಕೆಯಿಂದ ಕಡಿಮೆ ದರ್ಜೆಯ ಕಚ್ಚಾ ಪದಾರ್ಥಗಳನ್ನು ಬಳಸುವದರಿಂದ ಉತ್ಪಾದನೆಯಾಗುವ ವಸ್ತುಗಳ ಗುಣಮಟ್ಟ ಕುಸಿಯುತ್ತದೆ.
2. ಯಂತ್ರಗಳ ಮತ್ತು ಉಪಕರಣಗಳ ಬೆಲೆ ದುಬಾರಿಯಾಗಿದ್ದು ಈ ಕೈಗಾರಿಕೆಗಳು ಕೊಳ್ಳಲು ಸಮರ್ಥರಾಗಿರುವದಿಲ್ಲ.
3. ವಿದ್ಯುಚ್ಛಕ್ತಿಯ ಅಭಾವ & ಕಡಿತದಿಂದಾಗಿ ಉತ್ಪಾದನೆ ಕುಂಠಿತಗೊಳ್ಳುತ್ತದೆ.
4. ಹಳೆಯ ಕಾಲದ ತಂತ್ರಜ್ಞಾನ ಅನುಸರಿಸುವದರಿಂದ ಉತ್ಪಾದಿತ ವಸ್ತುಗಳ ಗುಣಮಟ್ಟ ಕಡಿಮೆಯಾಗುತ್ತದೆ.
5. ಈ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣ ದೊರೆಯದೇ ಇರುವದು ಒಂದು ಸಮಸ್ಯೆಯಾಗಿದೆ.
6. ಯೋಗ್ಯ ಮಾರುಕಟ್ಟೆಯ ಅಭಾವದಿಂದಾಗಿ ಉತ್ಪಾದಿಸಿದ ವಸ್ತುಗಳು ಸರಿಯಾದ ಬೆಲೆಗೆ ಮಾರಲಾಗದೇ ನಷ್ಟ ಅನುಭವಿಸುತ್ತವೆ.
7. ದೊಡ್ಡ ಕೈಗಾರಿಕೆಯ ಪೈಪೋಟಿಯಿಂದಾಗಿ ಈ ಕೈಗಾರಿಕೆಗಳ ಪ್ರಗತಿಗೆ ಅಡಚಣೆಯಾಗಿದೆ.

7] ಗೃಹ & ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಆರ್ಥಿಕ ಸಹಾಯ ಮಾಡಲು ಕೈಗೊಂಡ ಕ್ರಮಗಳು

1. ರಾಜ್ಯ ಸರಕಾರಗಳು ಕಡಿಮೆ ಬಡ್ಡಿ ದರದಲ್ಲಿ ಸಣ್ಣ ಉತ್ಪಾದಕರಿಗೆ ಮಧ್ಯಮಾವಧಿ ಸಾಲಗಳನ್ನು ಒದಗಿಸುತ್ತವೆ.
2. ಪ್ರತಿ ರಾಜ್ಯದಲ್ಲೂ ರಾಜ್ಯ ಹಣಕಾಸು ನಿಗಮಗಳು ಸಣ್ಣ ಉತ್ಪಾದಕರಿಗೆ ಮಧ್ಯಮಾವಧಿ ಸಾಲಗಳನ್ನು ಒದಗಿಸುತ್ತವೆ.
3. ಕೇಂದ್ರ ಸರಕಾರವು ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮವನ್ನು ಸ್ಥಾಪಿಸಿ ಸಣ್ಣ ಉತ್ಪಾದಕರಿಗೆ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಲು ಹಣ ಸಹಾಯ ಮಾಡುತ್ತದೆ.
4. ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಇತರ ರಾಷ್ಟ್ರೀಕೃತ ಬ್ಯಾಂಕುಗಳು ಸಣ್ಣ ಉತ್ಪಾದಕರಿಗೆ ಸಾಲಸೌಲಭ್ಯ ಒದಗಿಸುತ್ತವೆ.
5.

8] ಕೇಂದ್ರ ಸಣ್ಣ ಕೈಗಾರಿಕೆಗಳ ಸಂಸ್ಥೆಯು ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮತ್ತು ಉತ್ಪಾದಕರಿಗೆ ಮಾರ್ಗದರ್ಶನ ನಿಡುತ್ತದೆ.

9] ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮವು ಸಣ್ಣ ಕೈಗಾರಿಕೆಗಳಿಗೆ ನಿವೇಶನ ಮತ್ತು ಆಶ್ರಯ ನೀಡುತ್ತದೆ.

## ಅಧ್ಯಾಯ – 3 ಭಾರತದ ಆಂತರಿಕ ಮತ್ತು ವಿದೇಶಿ ವ್ಯಾಪಾರ

1] ವ್ಯಾಪಾರವೆಂದರೆ ವಸ್ತುಗಳನ್ನು ಅಥವಾ ಸರಕುಗಳನ್ನು ಮಾರುವದು ಅಥವಾ ಕೊಳ್ಳುವದು ಎಂದರ್ಥ.

2] ಒಂದು ದೇಶದ ಒಳಗಡೆ ನಡೆಯುವ ವ್ಯಾಪಾರವನ್ನು ಆಂತರಿಕ ವ್ಯಾಪಾರವೆಂದು ಕರೆಯುತ್ತಾರೆ.

3] ಅನೌಪಚಾರಿಕ ಪಡಿತರ ಪದ್ದತಿ :– ನ್ಯಾಯಬೆಲೆ ಅಂಗಡಿಗಳಲ್ಲಿ ಸರಕುಗಳನ್ನು ಅಥವಾ ದಿನಸಿಗಳನ್ನು ಕೊಳ್ಳಲು ಪಡಿತರ ಚೀಟಿಯನ್ನು ಜನರು ಪಡೆದಿರಬೇಕಾಗುತ್ತದೆ. ಈ ವ್ಯವಸ್ಥೆಯನ್ನು ಅನೌಪಚಾರಿಕ ಪಡಿತರ ಪದ್ದತಿ ಎಂದು ಕರೆಯುತ್ತಾರೆ.

4] ನ್ಯಾಯಬೆಲೆ ಅಂಗಡಿಗಳಿಗೆ ಸರಕುಗಳನ್ನು ಪೂರೈಸಲು ಕ್ರಿ ಶ 1965 ರಲ್ಲಿ ಭಾರತದ ಆಹಾರ ನಿಗಮವನ್ನು ಸ್ಥಾಪಿಸಲಾಗಿದೆ.

5] ರಾಷ್ಟ್ರ – ರಾಷ್ಟ್ರಗಳ ನಡುವೆ ನಡೆಯುವ ವ್ಯಾಪಾರವೇ ವಿದೇಶಿ ವ್ಯಾಪಾರವಾಗಿದೆ.

ವಿದೇಶಿ ವ್ಯಾಪಾರದಲ್ಲಿ ಮೂರು ವಿಧ – 1. ಆಮದು 2. ರಫ್ತು 3. ಪುನರ್ ರಫ್ತು

6] ಪುನರ್ ರಫ್ತು ಎಂದರೆ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದಿಂದ ಸರಕುಗಳನ್ನು ಕೊಂಡು ಬೇರೊಂದು ರಾಷ್ಟ್ರಕ್ಕೆ ಮಾರುವದೇ ಆಗಿದೆ. ಸಿಂಗಾಪೂರ ಈ ವ್ಯಾಪಾರಕ್ಕೆ ಉತ್ತಮ ಉದಾಹರಣೆಯಾಗಿದೆ.

7] ವಿದೇಶಿ ವ್ಯಾಪಾರದ ಅವಶ್ಯಕತೆ

1. ಪ್ರಪಂಚದ ಯಾವುದೇ ದೇಶವಾಗಲಿ ಎಲ್ಲಾ ಸಂಪನ್ಮೂಲಗಳನ್ನು ಹೊಂದಿರುವದಿಲ್ಲ.
2. ದೊರೆಯುವ ಸಂಪನ್ಮೂಲಗಳಲ್ಲಿ ದೇಶಕ್ಕೆ ಸಾಕಾಗಿ ಉಳಿದ ಸಂಪನ್ಮೂಲಗಳನ್ನು ರಫ್ತು ಮಾಡಲು ಮತ್ತು ಕೊರತೆ ಇರುವ ಸಂಪನ್ಮೂಲಗಳನ್ನು ಆಮದು ಮಾಡಿಕೊಳ್ಳಲು ವಿದೇಶಿ ವ್ಯಾಪಾರದ ಅವಶ್ಯಕತೆ ಇದೆ.

8] ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ವಿದೇಶಿ ವ್ಯಾಪಾರದ ಪ್ರಾಮುಖ್ಯತೆ

1. ನಮ್ಮ ಕೈಗಾರಿಕೆಗಳಿಗೆ ಬೇಕಾದ ಅನೇಕ ಯಂತ್ರಗಳನ್ನು ಮತ್ತು ಕಚ್ಚಾ ಪದಾರ್ಥಗಳನ್ನು ನಾವು ಇಂದಿಗೂ ವಿದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ.
2. ನಮ್ಮಲ್ಲಿ ಸಾಕಷ್ಟು ಲಭ್ಯವಾಗದ ಪೆಟ್ರೋಲ್, ತವರ, ಸತು, ಸೀಸ ಇವುಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ.
3. ಭಾರತದಲ್ಲಿ ಹೇರಳವಾಗಿ ದೊರೆಯುವ ಖನಿಜಗಳು ಮತ್ತು ಹೆಚ್ಚಾಗಿ ಉತ್ಪಾದನೆಯಾಗುವ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ಉದಾ : ಕಬ್ಬಿಣದ ಅದಿರು, ಸಕ್ಕರೆ, ಟೀ, ಅಬ್ರಕ ಇತ್ಯಾದಿ.
4. ನಮ್ಮ ಮತ್ತು ಇತರ ದೇಶಗಳ ಆರ್ಥಿಕ ಸಹಕಾರಕ್ಕೆ ವಿದೇಶಿ ವ್ಯಾಪಾರ ಸಹಾಯ ಮಾಡುತ್ತದೆ.
5. ಇದು ಅನೇಕ ಜನರಿಗೆ ಉದ್ಯೋಗ ಕಲ್ಪಿಸಿ ಜನರ ಜೀವನಮಟ್ಟ ಉತ್ತಮಗೊಳ್ಳಲು ಸಹಾಯ ಮಾಡುತ್ತದೆ.
6. ನಮ್ಮ ರಾಷ್ಟ್ರೀಯ ವರಮಾನ ಹೆಚ್ಚಳಕ್ಕೆ ಸಹಾಯ ಮಾಡುತ್ತದೆ.
7. ಅಂತರಾಷ್ಟ್ರೀಯ ಸ್ನೇಹ ಸೌಹಾರ್ದಗಳು ಕೂಡ ವಿದೇಶಿ ವ್ಯಾಪಾರದಿಂದ ಸಾದ್ಯವಾಗುತ್ತದೆ.

9] ಭಾರತದ ವಿದೇಶಿ ವ್ಯಾಪಾರದ ಲಕ್ಷಣಗಳು

1. ನಮ್ಮ ವಿದೇಶಿ ವ್ಯಾಪಾರದ ಶೇ. 85 ರಿಂದ 90 ರಷ್ಟು ಭಾಗ ಸಮುದ್ರ ಮಾರ್ಗಗಳ ಮೂಲಕ ನಡೆಯುತ್ತದೆ.
2. ನಮ್ಮ ಪಂಚವಾರ್ಷಿಕ ಯೋಜನೆಗಳು ರಫ್ತು ಮತ್ತು ಆಮದುಗಳೆರಡರ ಗಾತ್ರವನ್ನು ಹೆಚ್ಚಿಸಿವೆ.
3. ನಮ್ಮ ಆಮದಿನ ಮೊತ್ತ ರಫ್ತಿಗಿಂತ ಅಧಿಕವಾಗಿದೆ.
4. ನಮ್ಮ ವಿದೇಶಿ ವ್ಯಾಪಾರವು ಇಂದು ಪ್ರಪಂಚದ ಬಹುಪಾಲು ರಾಷ್ಟ್ರಗಳೊಂದಿಗೆ ನಡೆಯುತ್ತದೆ.
5. ನಮ್ಮ ಸರಕಾರವು ರಫ್ತನ್ನು ಹೆಚ್ಚಿಸಲು ಅನೇಕ ಕಾರ್ಯನಿರತ ಸಂಸ್ಥೆಗಳನ್ನು ಸ್ಥಾಪಿಸಿದೆ. ಉದಾ : ರಾಜ್ಯ ವ್ಯಾಪಾರ ನಿಗಮ, ಕೈಮಗ್ಗ ರಫ್ತು ನಿಗಮ
6. ಕ್ರಿ ಶ 1991 ರ ಜುಲೈನಲ್ಲಿ ನಮ್ಮ ರೂಪಾಯಿಯನ್ನು ಅಪಮೌಲ್ಯಗೊಳಿಸಲಾಯಿತು. ಇದರಿಂದ ಆಮದಿನಲ್ಲಿ ಕಡಿತ ಉಂಟಾಯಿತು.

10] ಸಾಂಬಾರ ಪದಾರ್ಥಗಳು ಭಾರತದ ರಫ್ತಿನ ಸರಕುಗಳಲ್ಲಿ ಅತ್ಯಂತ ಪುರಾತನ ವಸ್ತುವಾಗಿದೆ.

11] ವ್ಯಾಪಾರ ಶಿಲ್ಕು :– ಗೋಚರಿತ ರಫ್ತಿನ ಮೌಲ್ಯ ಮತ್ತು ಗೋಚರಿತ ಆಮದಿನ ಮೌಲ್ಯಗಳ ವ್ಯತ್ಯಾಸವನ್ನು ವ್ಯಾಪಾರ ಶಿಲ್ಕು ಎನ್ನುವರು.

ಪಾವತಿ ಶಿಲ್ಕು :– ಗೋಚರಿತ ಸರಕುಗಳ ಮೌಲ್ಯ ಮತ್ತು ಅಗೋಚರಿತ ಸೇವೆಯ ಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಪಾವತಿ ಶಿಲ್ಕು ಎನ್ನುವರು.

ವ್ಯಾಪಾರ ಶಿಲ್ಕು ಮತ್ತು ಪಾವತಿ ಶಿಲ್ಕಿಗಿರುವ ವ್ಯತ್ಯಾಸ

ವ್ಯಾಪಾರ ಶಿಲ್ಕು ಕೇವಲ ಗೋಚರಿತ ಆಮದು ಮತ್ತು ಗೋಚರಿತ ರಫ್ತಿನ ವ್ಯತ್ಯಾಸವನ್ನು ಮಾತ್ರ ತೋರಿಸುತ್ತದೆ. ಆದರೆ ಪಾವತಿ ಶಿಲ್ಕು ಗೋಚರಿತ ಸರಕುಗಳ ಮೌಲ್ಯ ಮತ್ತು ಅಗೋಚರಿತ ಸೇವೆಯ ಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಪಾವತಿ ಶಿಲ್ಕು ಎನ್ನುವರು.

12] ನಮ್ಮ ಪಾವತಿ ಶಿಲ್ಕು ಪತ್ರಿಕೂಲವಾಗಿ ಉಳಿದಿರಲು ಕಾರಣಗಳು

1. ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿರುವದು.
2. ಕೈಗಾರಿಕೆಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳುತ್ತಿರುವದು.
3. ನಮ್ಮ ಕೈಗಾರಿಕೆಗಳಿಗೆ ಬೇಕಾಗುವ ಅನೇಕ ಖನಿಜ ಮತ್ತು ಅದಿರುಗಳನ್ನು ಆಮದು ಮಾಡಿಕೊಳ್ಳುತ್ತಿರುವದು.
4. ಉತ್ತಮ ಮಟ್ಟದ ಹತ್ತಿ, ಕಚ್ಚಾ ಸಣಬು, ಮುದ್ರಣ ಕಾಗದ, ಕಾಗದ ಇತ್ಯಾದಿಗಳನ್ನು ಆಮದು ಮಾಡಿಕೊಳ್ಳುತ್ತಿರುವದು.
5. ಜನಸಂಖ್ಯೆಯ ಏರಿಕೆಯಿಂದಾಗಿ ಆಹಾರ ಧಾನ್ಯಗಳ ಕೊರತೆ ಉಂಟಾಗಿ ಅವುಗಳನ್ನು ಆಮದು ಮಾಡಿಕೊಳ್ಳುತ್ತಿರುವದು.
6. ಸೇವೆಗಳಿಂದಾಗುವ ಸಂಪಾದನೆ ಪಾವತಿ ಮಾಡುವದಕ್ಕಿಂತ ಕಡಿಮೆ ಇರುವದು.

13] ಭಾರತವು ಪ್ರತಿಕೂಲ ಪಾವತಿ ಶಿಲ್ಕನ್ನು ಸರಿಪಡಿಸಲು ಕೈಗೊಂಡ ಕ್ರಮಗಳು

1. ಆಮದು ನಿರ್ಬಂಧಗಳು 2. ಸರಕು ವಿನಿಮಯ 3. ರಫ್ತು ಪ್ರೋತ್ಸಾಹ
4. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಸಾಲ ತೆಗೆದುಕೊಂಡು ಪ್ರತಿಕೂಲ ಶಿಲ್ಕನ್ನು ಸರಿಪಡಿಸುವದು.
5. ನಮ್ಮ ಸರಕಾರವು 1961, 1966 ಹಾಗೂ 1991 ರಲ್ಲಿ ರೂಪಾಯಿಯ ಅಪಮೌಲ್ಯೀಕರಣ ಮಾಡಿತು.

14] ರಫ್ತು ಹೆಚ್ಚಿಸಲು ಸಕಾರ ಕೈಗೊಂಡ ಕ್ರಮಗಳು

1. ಕೆಲವು ವಸ್ತುಗಳ ಮೇಲೆ ರಫ್ತು ಸುಂಕ ತೆಗೆದುಹಾಕಲಾಗಿದೆ ಅಥವಾ ಕಡಿಮೆ ಮಾಡಲಾಗಿದೆ.

2. ರಫ್ತಿನ ವಸ್ತುಗಳ ಸಾಗಾಟಕ್ಕೆ ರೈಲು ಮತ್ತು ಹಡಗುಗಳ ಸೌಲಭ್ಯವನ್ನು ರಿಯಾಯತಿ ದರದಲ್ಲಿ ನೀಡಲಾಗುತ್ತದೆ.

3. ರಫ್ತು ಪ್ರೋತ್ಸಾಹಿಸಲು ರಫ್ತು ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಉದಾ : ರೇಷ್ಮೆ ನಿಗಮ

4. ರಫ್ತು ಮಾಡುವ ವಸ್ತುಗಳ ತಯಾರಕರಿಗೆ ಬ್ಯಾಂಕುಗಳು ಸಾಲ ಸೌಲಭ್ಯಗಳನ್ನು ಒದಗಿಸುತ್ತವೆ.

5. ರಫ್ತು ಮಾಡುವ ವಸ್ತುಗಳ ತಯಾರಕರಿಗೆ ಕೊಡುವ ಸಾಲಗಳಿಗೆ ಸರ್ಕಾರ ಜಾಮೀನು ಕೊಡುತ್ತದೆ. ಇದಕ್ಕಾಗಿ ಎಕ್ಷಿಂ ಬ್ಯಾಂಕನ್ನು ( ಆಮದು ಮತ್ತು ರಫ್ತು ಬ್ಯಾಂಕ್ ) ಸ್ಥಾಪಿಸಿದೆ.

6. ಅನೇಕ ದೇಶಗಳೊಂದಿಗೆ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

7. ರಫ್ತಿನ ಅಭಿವೃದ್ಧಿಗೆ ಖನಿಜಗಳ ಮಂಡಳಿ, ರೇಷ್ಮೆ ಮಂಡಳಿ ನಾರಿನ ಮಂಡಳಿ ಮುಂತಾದವುಗಳನ್ನು ಸ್ಥಾಪಿಸಲಾಗಿದೆ.

## ಅಧ್ಯಾಯ – 4 ಸರ್ಕಾರ ಮತ್ತು ಆರ್ಥಿಕಾಭಿವೃದ್ಧಿ

1] ಸುಖಿರಾಜ್ಯವೆಂದರೆ ಸರ್ಕಾರವು ತನ್ನ ಎಲ್ಲಾ ಪೌರರಿಗೂ ಕನಿಷ್ಠ ಸಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ನೀಡುವ ಬರವಸೆ ಕೊಡುವುದೇ ಆಗಿದೆ.

2] ಆರ್ಥಿಕ ಯೋಜನೆ :– ಒಂದು ದೇಶದಲ್ಲಿನ ಸಂಪನ್ಮೂಲಗಳನ್ನು ವಿವೇಚನೆಯಿಂದ ದಕ್ಷ ರೀತಿಯಲ್ಲಿ ಬಳಸಿಕೊಳ್ಳುವದಕ್ಕಾಗಿ ಪ್ರಜ್ಞಾಪೂರ್ವಕವಾಗಿ ವಿವೇಕದಿಂದ ಕೈಗೊಳ್ಳುವ ಕಾರ್ಯವನ್ನು ಆರ್ಥಿಕ ಯೋಜನೆ ಎನ್ನವರು.

3] ಕೇಂದ್ರ ಸರಕಾರವು 1950 ರಲ್ಲಿ ಆಗಿನ ಪ್ರದಾನಿ ಜವಾಹರಲಾಲ ನೆಹರು ಅಧ್ಯಕ್ಷತೆಯಲ್ಲಿ ಯೋಜನಾ ಆಯೋಗವನ್ನು ರಚಿಸಿತು.

4] ಯೋಜನಾ ಆಯೋಗದ ಅಧ್ಯಕ್ಷರು ಯಾವಾಗಲೂ ಪ್ರದಾನಮಂತ್ರಿಗಳೇ ಆಗಿರುತ್ತಾರೆ.

ಈಗ ಇರುವ ಯೋಜನಾ ಆಯೋಗದ ಉಪಾಧ್ಯಕ್ಷರು – ಮೌಂಟೆಕ್ ಸಿಂಗ್ ಅಹ್ಲುವಾಲಿಯಾ

5] ಆರ್ಥಿಕ ಯೋಜನೆಯ ಉದ್ದೇಶಗಳು

1. ಸಂಪನ್ಮೂಲಗಳನ್ನು ಸುವ್ಯವಸ್ಥಿತವಾಗಿ ಬಳಸಿಕೊಂಡು ದೇಶದ ಎಲ್ಲರಿಗೂ ಪೂರ್ಣ ಉದ್ಯೋಗ ಒದಗಿಸುವದು.

2. ಉತ್ಪಾದನೆ ಹೆಚ್ಚಿಸುವ ಮೂಲಕ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯವನ್ನು ಹೆಚ್ಚಿಸುವದು.

3. ದೇಶದ ಪ್ರಗತಿಗಾಗಿ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವದು.

4. ಜನರಿಗೆ ಆಹಾರ ಒದಗಿಸುವದು

5. ಕೃಷಿ ಆಧಾರಿತ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥಗಳ ಉತ್ಪಾದನೆ ಹೆಚ್ಚಿಸುವದು

6. ಉತ್ಪಾದನೆ ಹೆಚ್ಚಿಸಲು ಬಂಡವಾಳ ಶೇಖರಣೆ ಮಾಡುವದು.

6] ಭಾರತದ ಯೋಜನಾ ಆಯೋಗದ ಕಾರ್ಯಗಳು

1. ಭೌತಿಕ ಮತ್ತು ಸ್ವಾಭಾವಿಕ ಸಂಪನ್ಮೂಲಗಳನ್ನು ಅಂದಾಜು ಮಾಡುವದು.

2. ಸಂಪತ್ತುಗಳನ್ನು ಸರಿಯಾಗಿ ವಿನಿಯೋಗಿಸಲು ಯೋಜನೆ ರೂಪಿಸುವದು.

3. ಆರ್ಥಿಕಾಭಿವೃದ್ಧಿಗೆ ಉಂಟಾಗಬಹುದಾದ ಅಡಚಣೆಗಳನ್ನು ಗುರ್ತಿಸಿ ನಿವಾರಿಸುವದು.

4. ಆರ್ಥಿಕ ಯೋಜನೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವದು.

7] ಭಾರತಕ್ಕೆ ಯೋಜನೆಗಳ ಅವಶ್ಯಕತೆ : ಈ ಕೆಳಗಿನ ಅಂಶಗಳಿಗಾಗಿ ಯೋಜನೆಗಳ ಅವಶ್ಯಕತೆ ಇದೆ.

1. ಜನಸಮುದಾಯದ ಆರ್ಥಿಕ ಅಭಿವೃದ್ಧಿಗೆ 2. ಸಂಪತ್ತಿನ ಸಮಾನ ಹಂಚಿಕೆಗೆ

3. ಆರ್ಥಿಕ ಸ್ಥಿರತೆಗೆ 4. ಬಂಡವಾಳದ ಪೂರ್ಣ ಉಪಯೋಗಕ್ಕೆ

5. ಆಹಾರ ಸಮಸ್ಯೆಯ ನಿವಾರಣೆಗೆ 6. ಪೂರ್ಣ ಉದ್ಯೋಗದ ಸಾಧನೆಗೆ

7. ಕೈಗಾರಿಕೀಕರಣಕ್ಕಾಗಿ 8. ದೇಶದ ಸರ್ವತೋಮುಖ ಬೆಳವಣಿಗೆಗಾಗಿ.

8] ಭಾರತವು ರಷ್ಯ ದೇಶದ ಯೋಜನೆಗಳ ಮಾದರಿಯನ್ನು ಅನುಸರಿಸಿ ಐದು ವರ್ಷಗಳ ಅವಧಿಗೆ ಒಂದೊಂದು ಯೋಜನೆಯನ್ನು ರೂಪಿಸಿದೆ. ಅದನ್ನು ಪಂಚವಾರ್ಷಿಕ ಯೋಜನೆ ಎನ್ನುವರು.

9] ಮೂರನೇ ಪಂಚವಾರ್ಷಿಕ ಯೋಜನೆಯ ವೈಫಲ್ಯಕ್ಕೆ ಕಾರಣಗಳು

1. ಚೀನಾ (1962) ಮತ್ತು ಪಾಕಿಸ್ತಾನ (1965) ದೇಶಗಳ ಆಕ್ರಮಣ.

2. ಮಾನ್ಸೂನ್ ಮಳೆಗಳು ಸಕಾಲಕ್ಕೆ ಬಾರದೆಹೋದುದು.

3. ಜನರು ಕೃಷಿ ಅಭಿವೃದ್ಧಿಗಳಲ್ಲಿ ಸ್ವಲ್ಪಮಟ್ಟಿಗೆ ಅನಾಸಕ್ತಿಯನ್ನು ತೋರಿದರು.

10] ನಾಲ್ಕನೇ ಪಂಚವಾರ್ಷಿಕ ಯೋಜನೆಯ ವೈಫಲ್ಯಕ್ಕೆ ಕಾರಣಗಳು

1. ಬಾಂಗ್ಲಾಯುದ್ಧ ( 1971 ), ಬಾಂಗ್ಲಾದಿಂದ ಬಂದ ನಿರಾಶ್ರೀತರ ಸಮಸ್ಯೆ

2. ದೇಶದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ.

3. ರಾಸಾಯನಿಕ ಗೊಬ್ಬರಗಳ ಉತ್ಪಾದನೆಯಲ್ಲಿ ಇಳಿಮುಖ.

11] ಪ್ರಥಮ ಪಂಚವಾರ್ಷಿಕ ಯೋಜನೆ : ಕೃಷಿ : : ಎರಡನೇ ಪಂಚವಾರ್ಷಿಕ ಯೋಜನೆ : ಕೈಗಾರಿಕೆ.

12] ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿದ್ಧಿಯಲ್ಲಿ ವಿಫಲವಾಗಲು ಕಾರಣ

1. ವಿದ್ಯುಚ್ಛಕ್ತಿಯ ಕೊರತೆ 2. ಕಾರ್ಮಿಕರ ಮುಷ್ಕರ

13] ಭಾರತದಲ್ಲಿ ಆವರ್ತ ಯೋಜನೆಯನ್ನು ಜಾರಿಗೆ ತಂದ ಸರ್ಕಾರ — ಜನತಾ ಸರಕಾರ